**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸವಣೂರ**

**ಅಪರಾಧ ಮೊಕದ್ದಮೆ ಸಂಖ್ಯೆ : 800/2022**

ಪಿರ್ಯಾದಿ : ಪಿ.ಎಸ್.ಐ., ಸವಣೂರ ಪಿ.ಎಸ್.

**ವಿರುದ್ಧ**

ಆರೋಪಿತರು : ಬಸವರಾಜ ತಂದೆ ಅಂದಾನೆಪ್ಪಾ ಜಾನೊಪಂತರ,
ವಯ : 34 ವರ್ಷ, ಉದ್ಯೋಗ : ವ್ಯವಸಾಯ,
ಸಾ : ಲಿಂಗದಾಳ, ಗದಗ,
ತಾ : ಗದಗ, ಜಿ : ಗದಗ.

## ಆಪಾದನೆ

ಆರೋಪಿಯಾದ ನೀನು ದಿನಾಂಕ : 10.01.2022 ರಂದು ಬೆಳಗಿನ ಜಾವ 2.30 ಗಂಟೆ ಸುಮಾರಿಗೆ ಮಹಿಂದ್ರಾ ಟ್ರಾಕ್ಟರ ಇಂಜಿನ ನಂ.ಎಂ.33/ಖಿ 2492 ಮತ್ತು ಟ್ರೇಲರ ನಂಬರ ಸಿ.ಟಿ.ಡಬ್ಲೂ 9573 ನೇದ್ದರಲ್ಲಿ ಒಣ ಮೆಣಸಿನಕಾಯಿ ಲೋಡ್ ಮಾಡಿಕೊಂಡು ಅದರ ಮೇಲೆ ಪಿರ್ಯಾದುದಾರ ಸುನಿಲ ಮತ್ತು ಮುತ್ತಪ್ಪ ಉಳ್ಳಾಗಡ್ಡಿ ಇವರನ್ನು ಕೂಡ್ರಿಸಿಕೊಂಡು ಯಲವಿಗಿ ಗ್ರಾಮದ ಕಡೆಯಿಂದಾ ಸವಣೂರ ಕಡೆಗೆ ಅತಿ ಜೋರಾಗಿ ವ ನಿರ್ಲಕ್ಷ್ಯತನದಿಂದ ಅಲಾಯಿಸಿಕೊಂಡು ಬಂದವನೆ ಅಲ್ಲಿಪೂರ ಗ್ರಾಮ ದಾಟಿ ಸವಣೂರ ಕಡೆಗೆ ಸುಮಾರು 200 ಮೀಟರ ಅಂತರದಲ್ಲಿ ಜಾಫರಸಾಬ ತಂದೆ ಅಲ್ಲಾಭಕ್ಷ ಚೋಪದಾರ ಇವರಗೆ ಸೇರಿದ ಜಮೀನಿನ ಹತ್ತಿರ ಟಾರ ರಸ್ತೆಯ ತೆಗ್ಗಿನಲ್ಲಿ ಟ್ರಾಕ್ಟರ ಟ್ರೇಲರದ ಎಡಗಡೆ ಗಾಲಿಯನ್ನು ಕೆಡವಿ ಇಂಜಿನಿಂದ ಟ್ರಾಕ್ಟರ ಟ್ರೇಲರಿಗೆ ಜೋಡಿಸುವ ಹುಕ್ಕಾ ಕಟ್ಟಾಗುವಂತೆ ಮಾಡಿ ಟ್ರೇಲರನ್ನು ಡಬ್ಬಾಗಿ ಪಲ್ಟಿಯಾಗುವಂತೆ ಮಾಡಿ ಅಪಘಾತ ಪಡಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.279 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಿರಿರೆಂದು ಆಪಾದಿಸಲಾಗಿದೆ.

ಕೊನೆಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಮಹಿಂದ್ರಾ ಟ್ರಾಕ್ಟರ ಇಂಜಿನ ನಂ.ಎಂ.33/ಖಿ 2492 ಮತ್ತು ಟ್ರೇಲರ ನಂಬರ ಸಿ.ಟಿ.ಡಬ್ಲೂ 9573 ನೇದ್ದನ್ನು ಅಲ್ಲಿಪೂರ ಗ್ರಾಮ ದಾಟಿ ಸವಣೂರ ಕಡೆಗೆ ಸುಮಾರು 200 ಮೀಟರ ಅಂತರದಲ್ಲಿ ಜಾಫರಸಾಬ ತಂದೆ ಅಲ್ಲಾಭಕ್ಷ ಚೋಪದಾರ ಇವರಗೆ ಸೇರಿದ ಜಮೀನಿನ ಹತ್ತಿರ ಟಾರ ರಸ್ತೆಯ ತೆಗ್ಗಿನಲ್ಲಿ ಟ್ರಾಕ್ಟರ ಟ್ರೇಲರದ ಎಡಗಡೆ ಗಾಲಿಯನ್ನು ಕೆಡವಿ ಇಂಜಿನಿಂದ ಟ್ರಾಕ್ಟರ ಟ್ರೇಲರಿಗೆ ಜೋಡಿಸುವ ಹುಕ್ಕಾ ಕಟ್ಟಾಗುವಂತೆ ಮಾಡಿ ಟ್ರೇಲರನ್ನು ಡಬ್ಬಾಗಿ ಪಲ್ಟಿಯಾಗುವಂತೆ ಮಾಡಿ ಟ್ರೇಲರದ ಮೆಣಸಿನಕಾಯಿ ಲೋಡ ಮೇಲೆ ಕುಳಿತ ಸುನಿಲ ಮತ್ತು ಮುತ್ತಪ್ಪ ಉಳ್ಳಾಗಡ್ಡಿ ಈತನಿಗೆ ಟ್ರೆಲರ ಕೆಳಗೆ ಸಕ್ಕಿಕೊಳ್ಳುವಂತೆ ಮಾಡಿ ಅವನ ಎದೆಯ ಎಡಬಾಗದಲ್ಲಿ, ಎಡಗೈ ಮುಂಗೈ ಮೇಲೆ ಮತ್ತು ಬೆನ್ನಿಗೆ ಮರಣಾಂತಿಕ ಗಾಯ ಪಡಿಸಿ ಉಪಚಾರಕ್ಕೆ ಸವಣೂರ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ದಿನಾಂಕ : 10.01.2022 ರಂದು ಬೆಳಗಿನ ಜಾವ 3.00 ಗಂಟೆಗೆ

ಮರಣ ಹೊಂದುವಂತೆ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ.304(ಎ) ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಿರಿರೆಂದು ಆಪಾದಿಸಲಾಗಿದೆ.

(ಶ್ರೀ. ಶ್ರೇಯಾಂಶ ದೊಡ್ಡಮನಿ)
ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ.ಗಳು, ಸವಣೂರ.

## ಆರೋಪಿಯ ಉತ್ತರ

ಪ್ರಶ್ನೆ 1 : ಈಗ ನಿನಗೆ ಓದಿ ಹೇಳಿದ ಆಪಾದನೆಯ ಸಾರಾಂಶ ತಿಳಿಯಿತೇ ?
ಉತ್ತರ :

ಪ್ರಶ್ನೆ 2 : ಈ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೋ ?
ಉತ್ತರ :

(ಈ ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ ಆರೋಪಿ ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿದೆ ಎಂದು ಪ್ರಮಾಣಿಕರಿಸುತ್ತೇನೆ)

ಆರೋಪಿತರ ಸಹಿ

(ಶ್ರೀ. ಶ್ರೇಯಾಂಶ ದೊಡ್ಡಮನಿ)
ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ.ಗಳು, ಸವಣೂರ.

ದಿನಾಂಕ :